ಗ್ರೂಪ್ -ಡಿ	33,723
ಲಿಪಿಕ ಸಿಬ್ಬಂದಿಯ ಒಟ್ಟು ಸಂಖ್ಯೆ	2,135
ವಿವರ :	
ಗ್ರೂಪ್ -ಎ	1
ಗ್ರೂಪ್ -ಬಿ	37
ಗ್ರೂಪ್-ಸಿ	1,542
ಗ್ರೂಪ್ -ಡಿ	555

ಆ) ಸರ್ಕಾರದಿಂದ ವಸತಿ ಸೌಕರ್ಯವನ್ನು ಒದಗಿಸಲಾಗಿರುವ ಒಟ್ಟು ಸಂಖ್ಯೆ 22,539

1. ಡಿಜಿ ಮತ್ತು ಐಜಿಪಿ	1
2. ಎ.ಡಿಜಿಪಿ	1
3. ಐಜಿಪಿ	2
4. ಡಿಐಜಿಪಿ	8
5. ಎಸ್.ಪಿ.	37
6. ಡಿಎಸ್‌ಪಿ	79
7. ಸಿಪಿಐ	262
8. ಪಿಎಸ್‌ಐ	1,114
9. ಎಎಸ್‌ಐ	617
10. ಹೆಚ್‌ಸಿ	5,247
11. ಪಿಸಿಗಳು	15,171

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನಗಳಿಗಾಗಿ ಬಂದಿರುವ ಅರ್ಜಿಗಳು

2118 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನಗಳಿಗಾಗಿ ಯಾವಾಗ ಅರ್ಜಿಗಳನ್ನು ಕರೆಯಲಾಯಿತು ಹಾಗೂ ಇದಕ್ಕಾಗಿ ಬಂದ ಅರ್ಜಿಗಳೆಷ್ಟು?

ಆ) ಸಾರ್ವಜನಿಕರಿಂದ ಅರ್ಜಿಗಳನ್ನು ಕರೆದು ಹಲವಾರು ತಿಂಗಳುಗಳಾದರೂ ಇದುವರೆವಿಗೂ ನಿವೇಶನಗಳನ್ನು ನೀಡದಿರುವುದು ನಿಜವೇ?

ಇ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಿವೇಶನಕ್ಕಾಗಿ ಎಲ್ಲೆಲ್ಲಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದೆ?

ಈ) ಅರ್ಜಿಗಳನ್ನು ಕರೆದು ಹಲವಾರು ತಿಂಗಳುಗಳಾಗಿರುವುದರಿಂದ ಸರ್ಕಾರ ಆದಷ್ಟು ಬೇಗ ಪ್ರಾಧಿಕಾರದಿಂದ ನಿವೇಶನಗಳನ್ನು ಹಂಚಲು ಕ್ರಮ ಕೈಗೊಳ್ಳುತ್ತದೆಯೇ?

ಉ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಮಿತಿಯನ್ನು ಪುನಃ ರಚಿಸಲಾಗಿದೆಯೇ?

ಊ) ಇಲ್ಲದಿದ್ದಲ್ಲಿ, ಯಾವಾಗ ಪುನಃ ರಚಿಸಲಾಗುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):

ಅ) ಅಕ್ಟೋಬರ್ ಮತ್ತು ಡಿಸೆಂಬರ್ 1988ರಲ್ಲಿ ನಿವೇಶನ ಹಂಚಿಕೆಗಾಗಿ ಅರ್ಜಿಗಳನ್ನು ಕರೆಯಲಾಗಿತ್ತು. ಅರ್ಜಿಗಳ ಸಂಖ್ಯೆ 86,988

ಆ) ಹೌದು.

ಇ) ನಾಗರಬಾವಿ, ಮಾಳಗಾಳ, ಅರೇಹಳ್ಳಿ, ಇಟ್ಟಮಡು ಜರಗಾನಹಳ್ಳಿ, ಹೊಸಕೆರೆಹಳ್ಳಿ, ಹುಳಿಮಾವು, ಅರಕೆರೆ, ಬೊಮ್ಮೇನಹಳ್ಳಿ, ವೆಂಕೋಜಿರಾವ್ ಪಾನೆ, ಎಲಿಕುಂಟೆ, ದೊಮ್ಮಲೂರು, ದೊಡ್ಡಿಗುಂಟ, ಬಾಣಸವಾಡಿ, ಕೋಡಿಹಳ್ಳಿ, ಇತ್ಯಾದಿ ಗ್ರಾಮಗಳಲ್ಲಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ.

ಈ) ಹೌದು.

ಉ) ಇಲ್ಲ.

ಊ) ಪರಿಶೀಲಿಸಲಾಗುವುದು.

ರಾಜ್ಯದಲ್ಲಿ ಹೊಸ ಡಿಸ್ಟಿಲರಿಗಳಿಗೆ ಮಂಜೂರಾತಿ

2098 - ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಔರಾದ್) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1990-91 ಮತ್ತು 1991-92ನೇ ಸಾಲಿನಲ್ಲಿ ರಾಜ್ಯದಲ್ಲಿ ಎಷ್ಟು ಡಿಸ್ಟಿಲರಿಗಳನ್ನು ಸ್ಥಾಪಿಸಲು ಪರವಾನಗಿ ನೀಡಲಾಗಿದೆ? (ಪರವಾನಗಿ ಪಡೆದುಕೊಂಡ ಸಂಸ್ಥೆಯ ಹೆಸರು ಮತ್ತು ವಿವರಗಳನ್ನೊದಗಿಸುವುದು)*

ಆ) *ಈ ಪರವಾನಗಿಗಳನ್ನು ನೀಡುವಾಗ ಸರ್ಕಾರ ಪಾಲಿಸಿದ ನೀತಿ ನಿಯಮಗಳೇನು?*

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು):

ಅ) 1990-91 : 10

1991-92 : 13

(ವಿವರಗಳನ್ನು ಅನುಬಂಧದಲ್ಲಿ ನಮೂದಿಸಿದೆ)

ಆ) ಕರ್ನಾಟಕ ರಾಜ್ಯ ಅಬಕಾರಿ ಕಾಯಿದೆ 1965 ಕರ್ನಾಟಕ ರಾಜ್ಯ ಅಬಕಾರಿ (ಡಿಸ್ಟಿಲರಿ ಮತ್ತು ವೇರ್‌ಹೌಸ್) ನಿಯಮಗಳು, 1967 ಹಾಗೂ ಕೇಂದ್ರ ಸರ್ಕಾರವು ಈ ಬಗ್ಗೆ ನೀಡಲಾದ ನಿರ್ದೇಶನಗಳನ್ನು ಅನುಸರಿಸಲಾಗಿದೆ.